Regd No BG 155

— ಶ್ರೀ —

6—4—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಸ ಮು ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

13 ನೆಯ ತಾ. ನೆಹರು ಮಂತ್ರಿಮಂಡಲ ಪ್ರಮಾಣವಚನ

ಪಂ|| ನೆಹರು ಮಂತ್ರಿಮಂಡಲ ಈ ವಾಹೆ 13 ರಂದು ಪ್ರಮಾಣವಚನವನ್ನು ಸ್ವೀಕರಿಸುವ ನಿರೀಕ್ಷೆ ಇದೆ ಎಂದು ನವದೆಹಲಿ ವಾರ್ತೆ ತಿಳಿಸುತ್ತದೆ ಮಂತ್ರಿಮಂಡಲದ ಸಂಖ್ಯೆಯನ್ನು 12 ರಿಂದ 14 ಕ್ಕೆ ಏರಿಸುವ ನಿರೀಕ್ಷೆ ಇದೆ. ವಜಾಗೊಂಡಿರುವ ಮಾಜಿ ಹಣಕಾಸು ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ಅವರನ್ನು ಮತ್ತು ಶ್ರೀ ಬಿ. ಗೋಪಾಲರೆಡ್ಡಿಯವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳುವ ಸಂಭವವಿದೆ. ಕೇರಳದ ಮಾಜಿ ಮಂತ್ರಿ ಶ್ರೀ ಟಿ ಕೃಷ್ಣಮಾಚಾರಿಯವರು ಕೆಲಕಾಲದ ನಂತರ ಮಂತ್ರಿಮಂಡಲವನ್ನು ಸೇರುವ ಸಾಧ್ಯತೆ ಇದೆ ಅವರು ಖಾತೆ ಇಲ್ಲದ ಮಂತ್ರಿಯಾಗಿರುವರು. ಶ್ರೀ ಕೆ ಸಿ. ರೆಡ್ಡಿಯವರು ವಾಣಿಜ್ಯ ಮಂತ್ರಿಯಾಗಿ ಮುಂದುವರಿಯುವರು.

ಎಚ್ಚರಿಸಲು ಆಜ್ಞೆ

ಬೊಂಬಾಯಿನ ರೈಲ್ವೆ ಪೋಲಿಸು ಅಧಿಕಾರಿಗಳು ಮಾನ್ಯೆ ತೊಂದರೆ ಪಡುವ ಸನ್ನಿವೇಶ ಬಂದಿತ್ತು. ಲಾಕಪ್ಪಿನಲ್ಲಿ ಸನಗೆ ಕೊಟ್ಟ ಆಹಾರ ಇದೆಂದ ಜಪಾತಿ ಚೂರುಗಳನ್ನು ಹಳಸಿದ ತಂಕಾರಿಯನ್ನು ಪೆಸಿಡೆನ್ಸಿ ಮಾಜಿಸ್ಟ್ರೇಟರಿಗೆ ತಾನು ತಂದದನ್ನು ಅಂಡರ್ ಟ್ರಯಲ್ ತೋರಿಸಿದ ಅದನ್ನು ಸಂಬಂಧಿಸಿದ ಮಾಡುವ ಕ ಬ್ಯಾಕ್ಟರಿಗೆ ಎಚ್ಚರಿಸುವಂತೆ ಅವರು ಪೊ ಲೀಸರಿಗೆ ತಿಳಿಸಿದರು

ಸಿಡುಬಿನಿಂದ ಸಾವು

ಕಳೆದ ಆರು ತಿಂಗಳಲ್ಲಿ ಸಿಡುಬಿನಿಂದ ಗುಜರಾತು ರಾಜ್ಯದಲ್ಲಿ 500 ಕ್ಕೆ ಮೇಲ್ಪಟ್ಟ ಜನರು ಮೃತರೆಂದು ಅಹಮದಾಬಾದಿನ ವಾರ್ತೆ.

★

ಶಿವಾಜಿ ಗಣೇಶಂನ್ನು ಕ್ಲಾರ್ಕ್ ಗೇಬಲ್ ಆಫ್ ಇಂಡಿಯ ಎಂದು ಅಮೆರಿಕ ಪತ್ರಿಕೆಗಳು ಬರೆದಿವೆ

ನಿಜಲಿಂಗಪ್ಪನವರು ಚುನಾವಣೆಗೆ ನಿಲ್ಲಲು ಅವಕಾಶ

ಮಧ್ಯ ಪ್ರದೇಶದ ಮಾಜಿ ಮುಖ್ಯ ಡಾ|| ಕೈಲಾಸನಾಥ ಖಟಜು ವಿಧಾನ ಸಭೆಯ ಮರು ಚುನಾವಣೆಗೆ ನಿಲ್ಲಲು ಕಾಂಗ್ರೆಸು ಹೈಕಮಾಂಡು ಅವಕಾಶವಿತ್ತುದ್ದು ಅದೇ ಅವಕಾಶ ಶ್ರೀ ಎಸ್ ನಿಜಲಿಂಗಪ್ಪನವರಿಗೆ ಸಿಕ್ಕಲು ಸಂಪ್ರದಾಯ ಅಯಿತೆಂದು ಬೆಂಗಳೂರು ವಾರ್ತೆ ನಿಜಲಿಂಗಪ್ಪನವರಿಗಾಗಿ ಶ್ರೀ ವಾಲಿ ಚನ್ನಪ್ಪನವರು ಬೆಳಗಾಂನ ಸಂಪಗಾವನ್ನಿನಕ್ಕೇ ತ್ರದಿಂದ ಅಯ್ಕೆಯಾದ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರೆಂದು ಗೊತ್ತಾಗಿದೆ

ವಿನಾಯಿತಿಬೇಕೆಂದು ಚಿನ್ಮಯ

ಉತ್ತರ ಕಾಶಿಯ ಸ್ವಾಮಿ ಚಿನ್ಮಯಾನಂದಜಿಯವರು ಎನರ್ಜಿಕುಲಂನಲ್ಲಿ ನಿನ್ನೆ ಕೇರಳ ಹಿಂದೂ ಧಾರ್ಮಿಕ ಉಂಬಳಿಯು ಸಂಸ್ಥೆಗಳ ಅಧ್ಯಕ್ಷ ಶ್ರೀ ಕೆ. ಕುಟ್ಟೀ ಕೃಷ್ಣ ಮೆನನರ ಮುಂದೆ ಸಾಕ್ಷ್ಯವನ್ನು ಕೊಡುತ್ತಾ, ಕೇರಳ ಅಗ್ರೇರಿಯನ್ ರಿಲೇಷನ್ಸ್ ಕಾನೂನಿನಿಂದ ದೇವಾಲಯದ ಭೂಮಿಗೆ ವಿನಾಯಿತಿ ಕೊಡಬೇಕೆಂದು ತಿಳಿಸಿದರು.

ಬಾಂಧವ್ಯ ಕೆಡುತ್ತಿದೆ

ಮಾಸ್ಕೋ—ಪೀಕಿಂಗು ಬಾಂಧವ್ಯದಲ್ಲಿ ಮತ್ತು ಕಮ್ಯೂನಿಸ್ಟ್ ಬ್ಲಾಕಿನ ನಾಯಕತ್ವದ ಸ್ಪರ್ಧೆಯಲ್ಲಿ ಆಳವಾದ ಭಿನ್ನಾಭಿಪ್ರಾಯಗಳಿರುವದಾಗಿ ಸಾಕ್ಷ್ಯದಿಂದ ಗೊತ್ತಾಗುವದಾಗಿ ಅಮೆರಿಕದ ಸಂಸ್ಥಾನ ಕಾರ್ಯದರ್ಶಿ ಡೀಕ್ ರಸ್ಕರು ವಾಷಿಂಗ್ಟನ್ನಲ್ಲಿ ನಿನ್ನೆ ನುಡಿದರು. ಬ್ಲಾಕಿನ ಹೊರಗಿರುವ ಕಮ್ಯೂನಿಸ್ಟ್ ಪಕ್ಷಗಳಲ್ಲಿ ಇದರಿಂದ ಗೊಂದಲವಾಗಿದೆ ಎಂದವರು ತಿಳಿಸಿದರು.

ಸಮ್ಮಿಶ್ರ ಮಂತ್ರಿಮಂಡಲ

ದೇಶದ ಹಿತದೃಷ್ಟಿಯಿಂದ ಕಾಂಗ್ರೆಸು-ಪಿಎಸ್ಪಿ ಮಂತ್ರಿಮಂಡಲ ಕೇರಳದಲ್ಲಿ ಮುಂದುವರಿಯಬೇಕೆಂದು ಕೇರಳ ಮುಖ್ಯಮಂತ್ರಿ ಶ್ರೀ ಪಟ್ಟಂಥಾನುಪಿಳ್ಳೆ ಪಾಟ್ಟ ದಲ್ಲಿ ಸೇರಿದ್ದ ಪಿಎಸ್ಪಿ ರಾಷ್ಟ್ರೀಯ ಕಾರ್ಯಾಂಗದಲ್ಲಿ ಹೇಳಿದ್ದು ಸರ್ವಾನುಮತದಿಂದ ಅಂಗೀಕೃತವಾಯಿತು.

ಭಾರತದ ಒತ್ತಾಯ

ವಿಶ್ವಸಂಸ್ಥೆ ನಿಶ್ಯಸ್ತ್ರೀಕರಣ ಸಂಸ್ಥೆ ಸಿನ್ನೆ ನ್ಯೂಯಾರ್ಕಿನಲ್ಲಿ ಪ್ರಕಟಣೆಯನ್ನು ಇತ್ತಿದೆ. ಅಣುಅಸ್ತ್ರಗಳು ಉತ್ಪಾದನೆ ಆದರಾಜ್ಯದಿಂದ ಅದು ಹೊಂಹೋಗದಂತೆ ತಡೆಯಬೇಕೆಂದು ವಿಶ್ವಸಂಸ್ಥೆಗೆ ಭಾರತ ಒತ್ತಾಯ ಮಾಡಿದೆ.

ಬೆರಿಕೆ ಹಾಲು ವಶ

ಚಿಕ್ಕಮಂಗಳೂರು ದಕ್ಷಿಣ ರೇಂಜಿನ ಸಬ್ ಇನ್ಸ್ಪೆಕ್ಟರಾದ ಶ್ರೀ ನಾಗರಾಜರವರು ಮೊನ್ನೆ ತಮ್ಮ ಸ್ಕ್ವಾಡಿನೊಡನೆ 3 ಸಾವಿರ ಸೇರು ಬೇರಿಕೆ ಹಾಲು ವಶಪಡಿಸಿಕೊಂಡರು. 26 ಜನ ಹೆಂಗಸರು ಸೇರಿ 97 ಮಂದಿ ಹಾಲಿನ ವಾಹಾಟ ಗಾರರು ಬಂಧನವಾಯಿತು

3 ಸಾವಿರ ಸ್ಪೆಲ್ಲಿಂಗು ಹಾಸಿಗೆ

ಘಾನಾ ಕ್ವೆಗಾರಿಕೆ ಮಂತ್ರಿ ಕೊಬೊ ಯುಸೆ ಪತ್ನಿ ವೇರಿ ಎಡಸೆ ಲಂಡನ್ನಿನಲ್ಲಿ ಕೊಂಡ ಚಿನ್ನ ಹೊದಿಸಿದ 3000 ಸ್ಪೆಲ್ಲಿಂಗ ಬೆಲೆಯ ಹಾಸಿಗೆಯನ್ನು ಅದನು ತಯಾರಿಸಿದವರಿಗೆ ಇನ್ನೂ ವಾಪಸು ಇತಿಲ್ಲವೆಂದು ಲಂಡನಿನ ವರದಿ ಹಾಸಿಗೆ ಕೊಂಡುದಕ್ಕೆ ಘಾನಾದಲ್ಲಿ ಟೀಕೆಗಳು ಬಂದವು

× ಜಿನೀವಾದಲ್ಲಿ ಸರ್ವಾವೇಶವಾಗಿರುವ ಹದಿನೇಳು ರಾಷ್ಟ್ರಗಳ ನಿಶ್ಯಸ್ತ್ರೀಕರಣ ಸಮ್ಮೇಳನದಲ್ಲಿ ರಷ್ಯದ ವಲೆರಿಯನ್ ಜೋರಿನ್ ನಿನ್ನೆ ಪ್ರಾತನಾಡುತ್ತಾ, ವಿಶ್ವದ ರಾಷ್ಟ್ರಗಳು ಯುದ್ಧದ ಪ್ರಚಾರವನ್ನು ಅಕ್ರಮವೆಂದು ಘೋಷಿಸಬೇಕು ಎಂದು ನುಡಿದರು. ಅಂತರಾಷ್ಟ್ರ ಭರವಸೆಗೆ ಅಂಧಕ ಘೋಷಣೆ ಮುಖ್ಯವಾದ ಕಾರಣವೆಂದು ಅವರು ನುಡಿದರು

ವಿವಿಧ ವಿಷಯಗಳು

ಕಾನ್ಪುರದಿಂದ ಬಂದಿರುವ ವಾರ್ತೆ ಪ್ರಕಾರ ಇತ್ತೀಚಿಗೆ ನಡೆದ ಅಗ್ರ ವಿಶ್ವವಿದ್ಯಾನಿಲಯದ ಪರೀಕ್ಷೆಯು ಸುಮಾರು 500 ಉತ್ತರ ಪತ್ರಿಕೆಗಳು ಪತ್ತೆ ಇಲ್ಲದೆ ಪರೀಕ್ಷೆ ಹುಡುಕಾಟ ನಡೆದು ಕಡೆಗೆ ಕಬಾಡಿ ಅಂಗಡಿಯೊಂದರಲ್ಲಿ ಸಿಕ್ಕಿತು. ಇನ್ನೂ ಹೆಚ್ಚು ಪ್ರತಿಗಳು ಸಿಗಬೇಕು ಇವನು ಕಬಾಡಿಗೆ ಮಾರಲಾಗಿದ್ದಿತೆಂದು ಗೊತ್ತಾಗಿದೆ

ಎಂದಿಗಿಂತಲೂ ಹುಮ್ಮಸ್ಸಿನಿಂದ ಪ್ರಧಾನಿ ನೆಹರು ನಿನ್ನೆ ಕಂಡುಬಂದರೆಂದು ದೆಹಲಿಯಿಂದ ಹೊಂಟ ವೈದ್ಯ ಪ್ರಕಟಣೆ ತಿಳಿಸುತ್ತದೆ. ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನಿನ್ನೆ ಅವರೊಡನೆ 20 ನಿಮಿಷಗಳು ಇದ್ದರು.

ಕಟಾಂಗ ಅಧ್ಯಕ್ಷ ಮಾಯಿಸ್ತೆಯೊಂಬೆಯವನ್ನು ಸ್ಥಾನಬದ್ಧತೆಯಲ್ಲಿಡಲು ಲಿಯೋವಾಲ್ಡವಿಲೆ ಅಧಿಕಾರಿಗಳು ಪ್ರಯತ್ನಿಸುತ್ತಿರುವರೆಂದು ಕಟಾಂಗ ವಿದೇಶಾಂಗ ಮಂತ್ರಿ ಎವರಿಸ್ಟ್ ಕಿಂಬ ನಿನ್ನೆ ಎಲಿಜೆಬೆತವಿಲೆಯಲ್ಲಿ ತಿಳಿಸಿದರು.

ಪ್ರತಿಯೊಂದು ರಾಜ್ಯದಲ್ಲೂ ಪ್ಲಾನಿಂಗ್ ಬೋರ್ಡ್ ಇರಬೇಕೆಂದು ಯೋಜನಾ ಸಮಿತಿ ಸೂಚಿಸಿದೆ ಎಂದು ನವದೆಹಲಿ ವಾರ್ತೆಯಿಂದ ಗೊತ್ತಾಗಿದೆ ಈ ಬೋರ್ಡುಗಳು ಹೆಚ್ಚು ಕಡಿಮೆ ಪ್ಲಾನಿಂಗ್ ಕಮಿಷನ್ನಿನಂತೆ ರಚನೆಯಾಗಬೇಕೆಂದು, ಯೋಜನೆಗಳನ್ನು ಜಾರಿ ಮಾಡಲು ಸರ್ಕಾರಿಂಗಳಿಗೆ ಸಹಾಯ ಮಾಡಬೇಕೆಂದು ಸೂಚಿಸಿದೆ

ಒಂದು ವರ್ಷದ ಹಿಂದೆ ಸಿಂಹಳದಲ್ಲಿ ಜಾರಿ ಆದ ಜರೂರು ಪರಿಸ್ಥಿತಿ ಈ ತಿಂಗಳಿನಲ್ಲಿ ಮುಂದುವರಿಯುವ ಸಂಭವವಿಲ್ಲವೆಂದು ಕೊಲಂಬೊ ವಾರ್ತೆ.

ಭಾರತದಿಂದ ಅಮೆರಿಕ 50 ಸಾವಿರ ಟನ್ ಸಕ್ಕರೆ ಕೊಳ್ಳಲಿದೆಯೆಂದು ನಾಷನಲ್ ಗ್ರೆಟ್ ವಾರ್ತೆ.

ನಾಳೆಯ ಹಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಶ್ಯಸ್ವಾಮಿ ಜೋಯಿಸರಿಂದ

7 ತೃತೀಯ ಉತ್ತರಂ

ವಿವಿಧ ವಾರ್ತೆಗಳು

ನಾನಾ ಕೇಂದ್ರಗಳಲ್ಲಿ ಉಚಿತ ನೇತ್ರ ಪರೀಕ್ಷೆ ಮಾಡಲು ಪದ್ಮಶ್ರೀ ನೇತ್ರದಾನಿ ಡಾ|| ಎಂ. ಸಿ ಮೋದಿಯವರು ಗೋವಾ ಜಿಲ್ಲೆ ಪ್ರವಾಸ ಮಾಡಿದರು

೦೦೦೦

ಕಾರವಾರದಲ್ಲಿ ಡಾ|| ಎಂ ಸಿ ಮೋದಿಯವರ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಜಿಲ್ಲಾದಿಕಾರಿಯವರಾದ ಶ್ರೀ ಟಿ ಎಸ್ ನಾರಾಯಣ ರಾವ್ ಆರಂಭಿಸಿದರು.

೦೦೦೦

ಮೈಸೂರಿನ 1961 ರ ಲೇವಾದೇವಿ ವಿಧೇಯಕ ಮತ್ತು ಗಿರವಿದಾರರ ವಿಧೇಯಕಗಳಿಗೆ ರಾಷ್ಟ್ರ ಪತಿಗಳು ಸಮ್ಮ ತಿಸಿಲ್ಲ ಅಂಗೀಕಾರ ಮುದ್ರೆಯನ್ನೊತ್ತಿರುವರು ಲೇವಾದೇವಿ ಮಾಡುವವರು ಲೈಸನ್ಸು ಪಡೆದಿರಬೇಕು ಮತ್ತು ನಿರ್ದಿಷ್ಟ ರೀತಿಯಲ್ಲಿ ಲೆಕ್ಕ ಪತ್ರಗಳನ್ನಿಡಬೇಕು. ಡಿಕ್ರಿ ಪಡೆದ ಮೊಬಲಗನ್ನು ಕಂತುಗಳಲ್ಲಿ ಕಟ್ಟುವಂತೆ ಅಜ್ಞೆ ಮಾಡುವ ಅಧಿಕಾರಿಗಳನ್ನು ನ್ಯಾಯಾಸ್ಥಾನಗಳಿಗೆ ಕೊಡಲಾಗಿದೆ.

೦೦೦೦

ಅಧ್ಯಕ್ಷ ಕೆನಡಿಯವರಿಗೆ ಮೇ 29 ರಂದು ಅವರ 45 ನೆಯ ಜನ್ಮದಿನೋತ್ಸವದಂದು 25 ಲಕ್ಷ ಡಾಲರುಗಳ ಚೆಕ್ ಕೊಡಲಾಗುವುದು ಅವರ ತಂದೆ ಇವರಿಗಾಗಿ ಮಾಡಿರುವ ಟ್ರಸ್ಟ್ ಫಂಡಿನ ಶೇಕಡ 25 ರಷ್ಟು ಇದು.

೦೦೦೦

ವಜಾ ಮಾಡಲ್ಪಟ್ಟ ಕೊಯಿರಾಲಾ ಮಂತ್ರಿಮಂಡಲದ ಉಪಪ್ರಧಾನಿ ಡಾ|| ಪಿ ಬಿ ರಾಣಾ ಹಂಚೇರ್ ಮತ್ತಿತರ ಮಾಜಿ ಮಂತ್ರಿಗಳು ನೇಪಾಳದವರ ಆಸ್ತಿ ಪಾಸ್ತಿಗಳನ್ನು ನೆಟ್ಟಗೋಲು ಹಾಕಿಕೊಳ್ಳಲು ನೇಪಾಳದ ಗೃಹ ಮಂತ್ರಿ ಕೆ ಬಿ ಅಜ್ಞೆ ಮಾಡಿದೆ.

೦೦೦೦

ಜೋರ್ಡಾನಿನ ಅರಸ ಹುಸೇನರು ಮಾರ್ಚ್ 31 ರಂದು ಅಮ್ಮಾನ್‌ನಲ್ಲಿ ಭಾರತೀಯ ವಸ್ತು ಪ್ರದರ್ಶನವೊಂದನ್ನು ಉದ್ಘಾಟಿಸಿದರು

೦೦೦೦

ಸಭೆಯಲ್ಲಿ ಫೈಲುಗಳ ವ್ಯವಸ್ಥೆ ಮಾಡುವುದು ಸರಿಯಿಲ್ಲವೆಂದು ಉತ್ತರ ಪ್ರದೇಶದ ವಿಧಾನ ಸಭೆ ಸ್ಪೀಕರಿಗೆ ರೂಲಿಂಗು ಕೊಟ್ಟಿರುವುದಾಗಿ ಲಕ್ನೋ ವಾರ್ತೆ

೦೦೦೦

ಸಮ್ಮಿಶ್ರ ಮಂತ್ರಿ ಮಂಡಲವನ್ನು ಮುಕ್ತಾಯಗೊಳಿಸುವಂತೆ ವಿಂದಿನ ಎರ್ನಾಕುಲಂ ಅಧಿವೇಶನದಲ್ಲಿ ಸೂಚಿಸುವ ಠರಾವನ್ನು ಕೇರಳ ಕಾಂಗ್ರೆಸಿಗೆ ಅಧಿಕೃತ ನೋಟೀಸು ಕೊಡಲಾಗಿದೆ ಎಂದು ತಿರುವೇಂದ್ರಂ ವಾರ್ತೆ

Help The 'Gorakshana'

Advertise in Goraksana and help the pious cause

ಗೋರಕ್ಷಣ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ, ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.

ವುಡ್‌ಲ್ಯಾಂಡ್ಸ್ ಮಹೋನ್ನತ 9 ನೆ ವಾರ

ಜಂಗ್ಲಿ (ಹಿಂದಿ) **Junglee**

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಅಮೋಘ 3 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್

ಸಾವಿತ್ರಿ, ಎಂ ವಿ ರಾಜಮ್ಮ, ಸಂಧ್ಯ, ಮುತ್ತುಲಕ್ಷ್ಮಿ

ರಾಜಧಾನಿಯಲ್ಲಿ ದ್ವಿಪ್ರಥಮ ಪ್ರದರ್ಶನ [ದಿನವಹಿ 3 ಆಟಗಳು]

SHAKTI

SUDHA

A Superb Tonic

ಅಮೋಘಾದಲ್ಲಿ ನಯನ್ತಾರ ಚಿತ್ರಣಕ್ಕೆ ಸಂಬಂಧಿಸಿದ ಚಿತ್ರಗಳು